

ಮನೆಗೆ ಹೋಗ್ತಿದ್ದೆನಾ?' ಜೋರಾಗೇ ಹೇಳಿಕೊಂಡರು ಸರಯೂ.

ಸರಯೂಗೆ ಆರು ತಿಂಗಳ ಹಿಂದೆಯಷ್ಟೆ ರವಿ ಹೊಸ ಮೊಬೈಲು ಕೊಡಿಸಿದ್ದ. ಆಗಲೇ ಮನೆಗೆ ಬಂದಿದ್ದಳು ಸೊಸೆ ಮೀರಾಳ ಗೆಳತಿ ಸೀತಾ ರಾವ್. ಅವಳು ಯಾವುದೋ 'ದಕ್ಷಿಣ ಪ್ರದಕ್ಷಿಣೆ' ಎಂಬ ಹೆಸರಿನ ವಾಟ್ಸಪ್ಪು ಗ್ರೂಪಲ್ಲಿ ಇವರನ್ನೂ ಸದಸ್ಯೆ ಮಾಡಿದ್ದಳು. ಆಗಿನಿಂದ ಇಬ್ಬರಿಗೂ ಒಂಥರಾ ಆತ್ಮೀಯತೆ ಚಿಗುರಿತ್ತು. ವಾಟ್ಸಪ್ಪಿನಲ್ಲಿ ನಿತ್ಯ ಯಾರ್ಯಾರೋ ಹಾಕುವ ಚೆಂದದ ದೇವರ ಮೂರ್ತಿಗಳ ದರ್ಶನ, ತಿರುಪತಿ ತಿಮ್ಮಪ್ಪನ ಅಭಿಷೇಕ, ಮಂತ್ರಾಲಯದ ರಥೋತ್ಸವ ಎಲ್ಲಾ ಅಂದರೆ ಎಲ್ಲಾ ಸಾಕ್ಷಾತ್ ಎದುರಿಗೆ ನಡೆದಂತೆ ಕಾಣುತ್ತಿತ್ತು. ಹೀಗೆ ತಮ್ಮ ಬೇಸರಕ್ಕೊಂದು ಪರಿಹಾರ ಕೊಟ್ಟವಳ ಮೇಲೆ ಸರಯೂಗೆ ಅಕ್ಕರೆ ಮೂಡಿತ್ತು. ಅವಳು ತನ್ನತ್ತ ನೋಡಿ ಮೃದುವಾಗಿ ನಗುವಾಗ ಏನೋ ಖುಷಿಯಾಗುತ್ತದೆ ಸರಯೂಗೆ. ಆ ನಗುವಿನಲ್ಲಿ ಯೌವನದ ಅಟ್ಟಹಾಸವಿಲ್ಲ. 'ನನ್ನ ವೇಗದ ಜಗತ್ತೇ ಬೇರೆ, ನಿಮ್ಮ ವೃದ್ಧಾಪ್ಯದ ನಿಂತ ನೀರಿನ ಜಗತ್ತೇ ಬೇರೆ' ಎನ್ನುವ ತಾರುಣ್ಯ ಸಹಜ ದಾರ್ಷ್ಟ್ಯವಿಲ್ಲ. ಬದಲಿಗೆ ಏನೋ ಒಂದು ಆಪ್ತತೆ ಇದೆ.

ಒಂದಿನ ಅವಳ ಮೇಲೆ ಪ್ರೀತಿ ಉಕ್ಕಿ ಬಂದು ಜತನದಿಂದ ಕಾಪಾಡಿಕೊಂಡಿದ್ದ ತಮ್ಮ ಲಗ್ನದ ಭಾರೀ ಕಾಂಜೀವರಂ ಸೀರೆಯನ್ನು ಉಡುಗೊರೆ ಕೊಟ್ಟುಬಿಟ್ಟಿದ್ದರು. 'ಅದೇನು ನನಗೂ ಹೇಳದೆ ನಿನಗೆ ಸೀರೆ ಕೊಟ್ಟಿದ್ದು?' ಗೊಣಗಿದ್ದ ಮೀರಾಳ ಧ್ವನಿಯಲ್ಲಿ ಕಂಡೂ ಕಾಣದ ಅಸೂಯೆ.